# ಜಿಪುಣನ ಹೆಂಡತಿ ಉಣಬಾರದಂತೆ!



ಒಂದು ಗ್ರಾಮದಲ್ಲಿ ಒಬ್ಬ ವ್ಯಾಪಾರಿಯಿದ್ದ. ಅವನ ಹೆಸರು ಅಣ್ಣಪ್ಪ. ಅಲ್ಲಿದ್ದುದು ಅವನ ಒಬ್ಬನದೇ ಅಂಗಡಿ. ಹೀಗಾಗಿ ಎಷ್ಟು ದುಬಾರಿ ಬೆಲೆ ಹೇಳಿದರೂ ಜನ ತುಟಿಪಿಟಕ್ಕೆನ್ನದೆ ಹಣ ಕೊಟ್ಟು ಸರಕನ್ನು ಒಯ್ಯುತ್ತಿದ್ದರು. ಸಂಪತ್ತು ತುಂಬಿದಷ್ಟೂ ಅವನಲ್ಲಿ ದುರಾಸೆ ಹೆಚ್ಚುತ್ತಾ ಹೋಗುತ್ತಿತ್ತು. ಅವನಿಗೆ ತಿನ್ನುವ ಚಪಲ ಜಾಸ್ತಿ. ಹೆಂಡತಿಗೆ ಹೇಳಿ ಬಗೆ ಬಗೆಯ ಭಕ್ಷ್ಯಗಳನ್ನು ಮಾಡಿಸುತ್ತಿದ್ದ. ಹೆಂಡತಿಗೆ ಸ್ವಲ್ಪವೂ ಉಳಿಸದೆ ಎಲ್ಲವನ್ನೂ ತಾನೊಬ್ಬನೇ ನುಂಗಿ ಕೈ ನೆಕ್ಕಿ ಹೊರಗೆ ಬರುತ್ತಿದ್ದ. ಹೆಂಡತಿಯೊಂದಿಗೆ, 'ನಿನ್ನ ಊಟವಾಯಿತೇ?' ಎಂದು ತಪ್ಪಿಯೂ ಕೇಳುವವನಲ್ಲ. ಆದರೂ ಅವನಿಗೆ ದಿನಗಳೆದಂತೆ ಕೆಟ್ಟ ಸಂಶಯ ಕಾಡತೊಡಗಿತು. ಹೆಂಡತಿ ತಯಾರಿಸಿದ ಅಡುಗೆಯನ್ನು ತಾನೊಬ್ಬನೇ ಊಟ ಮಾಡುತ್ತೇನೆ. ಆದರೂ ಮನೆಗೆ ತಂದು ಹಾಕಿದ ದಿನಸಿ, ತರಕಾರಿಗಳ ಚೀಲಗಳು ಬಹು ಬೇಗನೆ ಬರಿದಾಗುತ್ತವಲ್ಲ ಇದಕ್ಕೇನು ಕಾರಣ ಎಂದು ಯೋಚನೆಗೀಡಾದ.

ಒಂದು ದಿನ ಅಂಗಡಿಗೆ ಹೋಗುವುದಾಗಿ ಹೇಳಿ ವ್ಯಾಪಾರಿ ಹೆಂಡತಿಗೆ ತಿಳಿಯದ ಹಾಗೆ ಮನೆಗೆ ಬಂದ. ಅಟ್ಟದಲ್ಲಿ ಹತ್ತಿ ಕುಳಿತು ಹೆಂಡತಿಯ ಚಲನವಲನಗಳನ್ನು ನೋಡತೊಡಗಿದ. ಗಂಡ ಹೊರಗೆ ಹೋದನೆಂದು ಭಾವಿಸಿ, ಅವಳು ಎಂದಿನಂತೆ ದೊಡ್ಡ ಪಾತ್ರೆಗಳಲ್ಲಿ ಹಲವು ಬಗೆಯ ಖಾದ್ಯಗಳನ್ನು ತಯಾರು ಮಾಡಿದಳು. ಅವೆಲ್ಲವನ್ನೂ ತಿಂದು ಪಾತ್ರೆಗಳನ್ನು ತೊಳೆದಿಟ್ಟಳು. ಇದನ್ನು ಕಂಡ ವ್ಯಾಪಾರಿ ಕೋಪದಿಂದ ಕುದಿದು ಹೋದ. ಕೂಡಲೇ ಕೆಳಗಿಳಿದ. ಹೆಂಡತಿಯ ಜುಟ್ಟು ಹಿಡಿದುಕೊಂಡು 'ನಾನು ಅಂಗಡಿಗೆ ಹೋದ ಕೂಡಲೇ ಎಂತಹ ದ್ರೋಹ ಮಾಡುತ್ತಿದ್ದೀಯೆಂಬುದು ಈ ದಿನ ನನಗೆ ತಿಳಿಯಿತು. ಅಷ್ಟೊಂದು ಆಹಾರ ಪದಾರ್ಥಗಳನ್ನು ನನಗೆ ತಿಳಿಯದಂತೆ ತಯಾರಿಸಿ ದಿನವೂ ನುಂಗುತ್ತಿರುವೆ ತಾನೆ? ಇದರಿಂದ ನಿನ್ನ ಆರೋಗ್ಯವೇನಾಗಬೇಕು ಎಂಬ ಚಿಂತೆ ನನಗಿಲ್ಲ, ನನ್ನ ಬೆವರಿನ ಶ್ರಮದಿಂದ ಗಳಿಸಿ ತಂದ ಇಷ್ಟು ಆಹಾರವನ್ನು ಒಬ್ಬಳೇ ತಿಂದರೆ ನನ್ನ ಸಂಪತ್ತು ನೀರು ಸೇರಿದ ಉಪ್ಪಿನ ಹಾಗೆ ಕರಗುತ್ತದೆ' ಎಂದು ಪರಿತಪಿಸಿದ.

'ನಾನು ಮಾಡಿದ ಎಲ್ಲ ಅಡುಗೆಯನ್ನೂ ನೀವೊಬ್ಬರೇ ದಿನವೂ ಉಂಡು

## ಕಾಮನಬಿಲ್ಲು



ನೋಡಿರಣ್ಣ ಮುಗಿಲ ಮೇಲೆ
ಬಣ್ಬಣ್ಣದ ಕಮಾನಿದೆ
ನಾವು ಹೋಗಿ ಮುಟ್ಟುವಂತೆ
ಕಾಣುತಿಹುದು ದೂರಕೆ

ಹಸಿರು–ನೀಲಿ, ಹಳದಿ–ಕೆಂಪು
ಬೂದು–ಕಂದು ಕಿತ್ತಲೆ;
ಬಣ್ಗಳಿಂದ ಸೃಷ್ಟಿಸಿರುವ
ದೇವನೆಂಥ ಶಿಲ್ಪಿಯು!

ಮುಗಿಲತಾಯಿ ನಾಡಿಗಾಗಿ
ಕಟ್ಟಿದಂತ ತೋರಣ
ಚಲುವ ಬೀರಿ, ನೆಲದ ಜನರ
ಮುಗಿಲ ಮೇಲೆ ಕರೆವುದು

ಇಂಥ ಚೆಲುವ ಜಗಕೆ ನೀಡಿ
ಜನರಿಗೆಲ್ಲ ಮೋಡಿ ಮಾಡಿ
ಸೃಷ್ಟಿ ಕರ್ತನೇಕೆ ನಮಗೆ
ಕಾಣದಾದನು!

**–ಚಂದೂ ದೇಪಾಪುರ, ಗುಂಡ್ಲುಪೇಟೆ**